ಎಂ.ಎಸ್. ಆಶಾದೇವಿ

# ದಾಹಕಾಲದ ಜೀವದಾಯಿನಿ ಕತೆಗಳು

ಸಾಹಿತ್ಯದ ಅಂತಿಮ ಗುರಿ ಏನು ಎನ್ನುವ ಪ್ರಶ್ನೆಗೂ ಸಾಹಿತ್ಯದ ಆತ್ಯಂತಿಕ ಶಕ್ತಿ ಯಾವುದು ಎನ್ನುವ ಪ್ರಶ್ನೆಗೂ ಗಾಢವಾದ ಸಂಬಂಧವಿದೆ. ಮನುಷ್ಯರನ್ನು ಸದಾ ಕಾಡುವ ಕೆಲವು ಮೂಲಭೂತ ಸಂಗತಿಗಳನ್ನು ಅದು ಎಲ್ಲ ದಿಕ್ಕುಗಳಿಂದಲೂ ತಾನೂ ಕಾಣಲು ಹವಣಿಸುತ್ತ, ಕೆಲವೊಮ್ಮೆ ಕಂಡು, ಕೆಲವೊಮ್ಮೆ ದೂರದಿಂದ ಕಾಣಿಸಿ, ಮತ್ತೆ ಕೆಲವೊಮ್ಮೆ 'ಅಯ್ಯೋ ನನಗೂ ಅಸ್ಪಷ್ಟವಾಗಿದೆ, ಮತ್ತೊಮ್ಮೆ ಪ್ರಯತ್ನಿಸೋಣ ಇರಿ' ಎಂದು ನಮ್ಮಷ್ಟೇ ಒದ್ದಾಡುತ್ತಾ, ಇನ್ನೂ ಕೆಲವೊಮ್ಮೆ 'ನನಗೇ ಇಷ್ಟು ಕಷ್ಟವಾಗುತ್ತಿದೆಯಲ್ಲಾ, ಇನ್ನು ಪಾಪ, ಅನುಭವಿಸುತ್ತಿರುವ ನಿಮಗೆಷ್ಟು ಕಷ್ಟವೋ' ಎಂದು ಮರುಗುತ್ತಾ, ಹೀಗೆ ನಮ್ಮೊಂದಿಗೆ ಅಳುತ್ತಾ ನಗುತ್ತಾ ಸದಾ ನಮ್ಮೊಂದಿಗೆ ಇರುವ ಸಾಹಿತ್ಯವನ್ನು ಈ ಕಾರಣಕ್ಕಾಗಿಯೇ ನಾವು ಸದಾ ಒಪ್ಪಿ ಅಪ್ಪುವುದು. ಸದಾ ಕಾಡುವ ಯಾವ ಮೂಲಭೂತ ಸಂಗತಿಗಳು ಅವು? ಜೀವನ ಎಂದರೆ ಏನು? ಏರಬೇಕಾದ ಹಿಮಾಲಯವೆ? ತಳಮುಟ್ಟಬೇಕಾದ ಸಮುದ್ರವೆ? ದಾರಿಯೇ ಕಾಣದ ಕಗ್ಗಾಡೆ? ಮೂರ್ತ ಭವಕ್ಕೂ ಅಮೂರ್ತ ಪಾರಮಾರ್ಥಿಕಕ್ಕೂ ನಡುವಿನ ನಿರ್ವಾತವೆ? ಮನುಷ್ಯರನ್ನು, ಬದುಕನ್ನು ಎಂದಿಗಾದರೂ ಶೇಷವಿಲ್ಲದೆ ಅರ್ಥ ಮಾಡಿಕೊಳ್ಳುವುದು ಸಾಧ್ಯವೆ? ಯಾಕಾಗಿ ಬದುಕು ಕಾಣ ಕಾಣುತ್ತಲೇ ಕಾಣದಾಗುತ್ತದೆ? ಭರವಸೆ ಹುಟ್ಟಿಸುತ್ತಲೇ ನಮ್ಮನ್ನು ನಿರಾಸೆಯ ಕೂಪಕ್ಕೆ




**ಮಲಯಾಳಂ ಕತೆಗಳು**
**ಕನ್ನಡಕ್ಕೆ: ಕೆ.ಕೆ. ಗಂಗಾಧರನ್**

ಪು: 177 ಬೆ: ರೂ. 100
ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು– 560 056

**'ನನ್ನ ಓದು' ಕನ್ನಡದ ಮುಖ್ಯ ಪುಸ್ತಕಗಳನ್ನು ಪರಿಚಯಿಸುವ ಮಾಲಿಕೆ. ಪ್ರತಿ ತಿಂಗಳು ಹೊಸ ಕನ್ನಡ ಪುಸ್ತಕಗಳ ಕುರಿತ ಅವಲೋಕನವನ್ನು ಇಲ್ಲಿ ಕೊಡಲಾಗುತ್ತದೆ.**